ಪಿ.ಡಬ್ಲ್ಯೂ.- **1**

ಸಾಕ್ಷಿಯು ದಿನಾಂಕ- **29-01-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀಸವಾಲು- ಎದುರುದಾರರ ಪರ ವಕೀಲರಿಂದ</u>-

ನಾನು ಇಂಜಿನಿಯರಿಂಗ್ ಪಧವಿಧರಳಾಗಿದ್ದೇನೆ. ನನಗೆ ತಂದೆ, ತಾಯಿ ಮತ್ತು ನನ್ನ ಅಣ್ಣ ಇರುತ್ತಾರೆ. ನನ್ನ ತಂದೆ ತಾಯಿ ಬೇರೆ ಮನೆಯಲ್ಲಿ ವಾಸಮಾಡುತ್ತಿದ್ದು, ನನ್ನ ಅಣ್ಣ ಬೇರೆ ಮನೆಯಲ್ಲಿ ವಾಸಮಾಡುತ್ತಾರೆ ಎಂದರೆ ಸರಿ. ನಾನು ನಮ್ಮ ತಂದೆ ತಾಯಿಯ ಜೊತೆ ವಾಸಮಾಡುತ್ತಿದ್ದೇನೆ. ನನ್ನ ತಂದೆ ತಾಯಿಯ ಮೂಲ ಊರು ಹೊಸಪೇಟೆ ಎಂದರೆ ಸರಿ. ನಾನು ಹಾಲಿ ಎಲ್ಲಿಯೂ ಕೆಲಸ ಮಾಡುತ್ತಿಲ್ಲ. ನಾನು ಜೆ.ಎಸ್.ಡಬ್ಲೂ ನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪದವಿ ಶಿಕ್ಷಣ ಪಡೆಯುತ್ತಿದ್ದಾಗಲೆ ಕ್ಯಾಂಪಸ್ ಸೆಲೆಕ್ಷನ್ ನಲ್ಲಿ ಜೆ.ಎಸ್.ಡಬ್ಲೂ ನಲ್ಲಿ ಕೆಲಸಕ್ಕೆ ಸೇರಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈಗ ತಾನು ಉದ್ಯೋಗ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಕೆಲಸಕ್ಕೆ ಸೇರಿದಾಗ ನನ್ನ ತಿಂಗಳ ಸಂಬಳ ರೂ. **20** ಸಾವಿರ ಇತ್ತು. ನಾನು ಕಾಂಟ್ರಾಕ್ಟ್ ಆಧಾರದ ಮೇಲೆ ಕೆಲಸಕ್ಕೆ ಸೇರಿದ್ದೆ. ನನಗೆ ತಿಂಗಳಿಗೆ ರೂ. **60** ಸಾವಿರಕ್ಕಿಂತಲೂ ಹೆಚ್ಚಿಗೆ ಸಂಬಳ ಇತ್ತು ಎಂದರೆ ಸರಿಯಲ್ಲ. ನಾನು ಹಾಗೂ ಅರ್ಜಿದಾರರ ನಂಃ **2** ಈಗಲೂ ಸಹ ಜೆ.ಎಸ್.ಡಬ್ಲೂ ಕ್ವಾಟ್ರಸ್ ನಲ್ಲಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ಮಗು ಜೇಂದಾಲ್ ಶಾಲೆಯಲ್ಲಿ ಓದುತ್ತಿದ್ದಾರೆ ಎಂದರೆ ಸರಿಯಲ್ಲ.

**2.** ಎದುರುದಾರರಿಗೆ ಬಳ್ಳಾರಿಯಲ್ಲಿ ಮನೆ ಇರುವ ಬಗ್ಗೆ ನಾನು ದಾಖಲೆ ಹಾಜರುಪಡಿಸಿಲ್ಲ. ಸಾಕ್ಷಿ ಸ್ವಇಚ್ಚೆಯಿಂದ ಸದರಿ ಮನೆಯನ್ನು ಎದುರುದಾರರು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರ ವಿರುದ್ಧ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಒಂದು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಜೀವನಾಂಶ ವಸೂಲಾತಿ ಸಲುವಾಗಿ ಸದರಿ ಪ್ರಕರಣ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಎದುರುದಾರರು ನನಗೆ ಪ್ರತಿ ತಿಂಗಳು ಜೀವನಾಂಶ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABI440018862023/truecopy/order-3.pdf

www.ecourtsindia.com

ಎದುರುದಾರರು ಜೀವನಾಂಶ ಕೊಡದೆ ಇರುವ ಬಗ್ಗೆ ನಾನು ಪ್ರಕರಣದ ಆದೇಶ ಪುಟಗಳನ್ನು ಹಾಜರುಪಡಿಸಿರುವುದಿಲ್ಲ.

**3.** ಎದುರುದಾರರು ನನಗೆ ಬೆಂಗಳೂರಿನಲ್ಲಿ ಕೆಲಸ ಕೊಡಿಸುವ ಬಗ್ಗೆ ನನ್ನ ವಿವರ ಕೇಳಿದ್ದು ನಾನು ಅದನ್ನು ನೀಡಿದ ನಂತರ ಬೆಂಗಳೂರಿಗೆ ಹೋಗಲು ನಿರಾಕರಿಸಿದೆ ಎಂದರೆ ಸರಿಯಲ್ಲ. ಆ ಬಗ್ಗೆ ಎದುರುದಾರ ಕುಟುಂಬದವರು ಹೇಳಿದರು ನಾನು ಎದುರುದಾರ ಜೊತೆ ಹೋಗಲಿಲ್ಲ ಎಂದರೆ ಸರಿಯಲ್ಲ. ನಮ್ಮ ಸಮಾಜದವರು ನನಗೆ ಬುದ್ದಿವಾದ ಹೇಳಿದ್ದರು ಸಹ ನಾನು ಕೇಳಲಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಎದುರುದಾರ ನಡುವೆ ವಿವಾಹ ವಿಚ್ಚೆಧನ ಆದೇಶ ಆಗಿರುತ್ತದೆ. ಸಾಕ್ಷಿ ಮುಂದುವರೆದು ಸದರಿ ಆದೇಶದ ವಿರುದ್ಧ ತಾನು ಮೇಲ್ಮನವಿ ಸಲ್ಲಿಸಿರುವುದಾಗಿ ತಿಳಿಸುತ್ತಾರೆ.

**4.** ನಾನು ಪ್ರಭಾವಿ ವ್ಯಕ್ತಿಗಳ ಮೂಲಕ ಎದುರುದಾರರಿಗೆ ತೊಂದರೆ ಕೊಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳ ಮೂಲಕ ನಾನು ಬಳ್ಳಾರಿ ನ್ಯಾಯಾಲಯದಲ್ಲಿ ಪಾಲು ವಿಭಾಗದ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ನನ್ನ ಸ್ವಂತ ಆದಾಯದಿಂದ ಜೀವನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ವಿಚ್ಚೆದನ ಆದೇಶ ಆಗಿರುವ ಕಾರಣ ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಎದುರುದಾರರ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ನ್ಯಾಯದಾನದ ದೃಷ್ಟಿಯಿಂದ ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು, ಹೊಸಪೇಟೆ.

This is a True Copy of the Court Records Online. Authenticated @ districts.ecourtsindia.com/cnr/KABI440018862023/truecopy/order-3.pdf